

# ಬಟ್ಟೆಯಲ್ಲಿ ಎಂಬೋಸ್; ಮೊಟ್ಟೆಯಲ್ಲಿ ಕಾರ್ವಿಂಗ್...!

**ಸೃಜನಶೀಲತೆಯ ಮನಸ್ಸು, ಆಸಕ್ತಿ ಹಾಗೂ ಅವಕಾಶಗಳಿದ್ದರೆ ಕಲೆಯಲ್ಲಿ ಏನನ್ನಾದರೂ ಸಾಧಿಸಬಹುದು. ಬೆಂಗಳೂರಿನ ಸುಧಾ ಮಲ್ಲಿಕಾರ್ಜುನ್ ಅವರು ತಮ್ಮ ಆಸಕ್ತಿಗೆ ನೀರೆರೆದು ಪೋಷಿಸಿಕೊಂಡು ಮಾಡಿರುವ ಕರಕುಶಲ ಕಲೆ, ಪೇಂಟಿಂಗ್, ಕಾರ್ವಿಂಗ್ ದೇಶ ವಿದೇಶಗಳಲ್ಲಿ ಖ್ಯಾತಿ ಗಳಿಸಿದೆ.**

**■ ಸವಿತಾ ನಾಗೇಶ್**

ಒಂದೆಡೆ ಎಗ್ ಆರ್ಟ್ ವರ್ಕ್, ಮತ್ತೊಂದು ಕಡೆ ಬಟ್ಟೆಯ ಮೇಲೆ ವರ್ಣರಂಜಿತ ಎಂಬೋಸ್, ಪೇಂಟಿಂಗ್‌ಗಳ ಒಪ್ಪವಾದ ಜೋಡಣೆ, ದಾರದಲ್ಲಿ ಕುಂದನ್‌ನಲ್ಲಿ ಪ್ಲೈವುಡ್‌ನಲ್ಲಿ ಮಾಡಿರುವ ತರಾವರಿ ಕರಕುಶಲ ಕಲೆ... ಎಲ್ಲವೂ ಸೃಜನಶೀಲ ಮನಸ್ಸಿಗೆ ಸಾಕ್ಷಿಯಾಗಿತ್ತು. ಇದು ಕಲಾವಿದೆ ಸುಧಾ ಮಲ್ಲಿಕಾರ್ಜುನ್ ಅವರ ಕೈಚಳಕದಲ್ಲಿ ಸಾಕಾರಗೊಂಡ ಕಲಾಸಂಗ್ರಹ.

ಹೌದು, ಜೀವನದಲ್ಲಿ ಒಬ್ಬೊಬ್ಬರಿಗೂ ಒಂದೊಂದು ಹವ್ಯಾಸ. ಸಂಗೀತ ಸಾಹಿತ್ಯ ಕರಕುಶಲ ಕೈಕೆಲಸ ಹೀಗೆ... ಕಲಿಯುವ ಆಸೆ ಆಸಕ್ತಿಯಿಂದ ಅದರ ಬೆನ್ನು ಹಿಡಿಯುತ್ತಾರೆ. ಹಾಗೆ ಹೋದಾಗ ಸಿಗುವ ತೃಪ್ತಿ ಸಮಾಧಾನ, ಖುಷಿ ಅಪರಿಮಿತ. ಮನದಲ್ಲಿ ಅಡಗಿದ ದುಃಖ ದುಗುಡಗಳನ್ನು ಇಂಥ ಹವ್ಯಾಸಗಳು ಮರೆಸುತ್ತದೆ. ಹೊಸ ಚೈತನ್ಯ ಲವಲವಿಕೆ ಮೂಡಿಸುತ್ತದೆ. ಇಂಥ ಕಲಾ ಕೌಶಲತೆಯೊಟ್ಟಿಗೆ ಸಂತಸ ಸಂತೃಪ್ತಿ ಪಡೆದುಕೊಳ್ಳುತ್ತ ಇತರರಿಗೆ ಮಾರ್ಗದರ್ಶಕರಾಗಿರುವವರು ಸುಧಾ ಮಲ್ಲಿಕಾರ್ಜುನ್.

ಬೆಂಗಳೂರಿನ ಇಸ್ಕಾನ್ ಟೆಂಪಲ್ ಬಳಿಯ ತನ್ನ ಮನೆಯಲ್ಲಿ ಕಲಾಕೃತಿಗಳ ಸಂಗ್ರಹವನ್ನು ಕಲೆಹಾಕಿರುವ ಸುಧಾ, ಇದನ್ನು 'ಆರ್ಟ್ ಅಂಡರ್ ವನ್ ರೂಫ್' ಎಂದು ನೋಡುಗರಿಗೆ ವರ್ಣಿಸುತ್ತಾರೆ. ಮನೆಯೊಳಗೆ ಅಡಿಯಿಡುತ್ತಿದ್ದಂತೆ ಮೊದಲು ಸ್ವಾಗತಿಸಿವುದು 'ಎಗ್ ಆರ್ಟ್ ವರ್ಕ್'. (ಮೊಟ್ಟೆಯಲ್ಲಿ ಕುಶಲಕಲೆ) ಅದ್ಭುತ ಬಾತುಕೋಳಿ ಮೊಟ್ಟೆ, ಕೋಳಿ ಮೊಟ್ಟೆ ಹಾಗೂ ಗೀಜಗನ ಮೊಟ್ಟೆಗಳಿಂದ ತಯಾರಿಸಿದ ಕಲೆಯನ್ನು ನೋಡುತ್ತಿದ್ದರೆ ಎಂಥವರೂ ಮೂಕವಿಸ್ಮಿತರಾಗುತ್ತಾರೆ. ಎಷ್ಟೊಂದು ಪ್ರಕಾರಗಳು ಅದರಲ್ಲಿ! ನಾವು ಶಾಲಾ ದಿನಗಳಲ್ಲಿ ಕೋಳಿ ಮೊಟ್ಟೆ ಮೇಲೆ ಪೈಂಟಿಂಗ್ ಮಾಡುತ್ತಿದ್ದದ್ದು ನೆನಪಾಯಿತು. ವಿವಿಧ ರೀತಿಯ ಕಲೆ ಮೊಟ್ಟೆಯಲ್ಲಿ ಅರಳಿತ್ತು. ಪೈಂಟಿಂಗ್, ಕಾರ್ವಿಂಗ್, ಎಂಬೋಸಿಂಗ್... ಒಂದಕ್ಕಿಂತ ಒಂದು ಅಚ್ಚರಿ ಮೂಡಿಸಿತ್ತು.

ಈ ಕಲೆ ಮಾಡಲು ಅಪಾರ ಪರಿಶ್ರಮ ಪೂರ್ವ ತಯಾರಿಯೇ ಅತ್ಯವಶ್ಯ. ಅಂಗಡಿಯಿಂದ ತಂದ ಮೊಟ್ಟೆಯನ್ನು ಮೊದಲಿಗೆ ಅದರ ಆಕಾರ ಸೆಲೆಕ್ಟ್ ಮಾಡಬೇಕು. ನಂತರ ಬಹಳ ಸೂಕ್ಷ್ಮವಾಗಿ ಒಂದು ರಂಧ್ರ ಮಾಡಿ ಅದರಿಂದ ಒಳಗಿರುವುದನ್ನೆಲ್ಲ ತೆಗೆಯಬೇಕು. 2 ರಿಂದ 3 ಬಾರಿ ನೀರಿನಲ್ಲಿ ತೊಳೆದು ಮತ್ತೆ ನೀರು ತುಂಬಿ 2 3 ನಿಮಿಷ ಕುದಿಸಬೇಕು.